# ಕರ್ನಾಟಕ ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ಅಧಿನಿಯಮ, 2001

## ಪ್ರಕರಣಗಳ ಅನುಕ್ರಮಣಿಕೆ


ಉದ್ದೇಶ ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1. ಚಿಕ್ಕ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಧೂಮಪಾನ, ಧೂಮಪಾನ ವಸ್ತುಗಳ ಜಾಹೀರಾತು, ಮಾರಾಟ ಮತ್ತು ದಾಸ್ತಾನಿನ ನಿಷೇದ
4. ನೋಟೀಸನ್ನು ನೋಡುವ ಸಲುವಾಗಿ ತೆರೆದಿಡುವುದು
5. ದಂಡಗಳು
6. ಪ್ರಾಧಿಕೃತ ಅಧಿಕಾರಿ
7. ಅಪರಾಧದ ಸ್ಥಳದಿಂದ ಒಬ್ಬ ವ್ಯಕ್ತಿಯನ್ನು ಹೊರಹಾಕುವುದು
8. ಈ ಅಧಿನಿಯಮದ ಅಡಿಯಲ್ಲಿ ಅಪರಾಧಗಳ ಅಧಿವಿಚಾರಣೆ ನಡೆಸಲು ಮತ್ತು ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಸಕ್ಷಮವಾದ ನ್ಯಾಯಾಲಯ
9. ನಿರ್ದಿಷ್ಟ ಅಪರಾಧಗಳು ಸಜ್ಞೇಯ ಮತ್ತು ಜಾಮೀನೀಯವಾಗಿರುವುದು
10. ಅಧಿನಿಯಮದ ಅಡಿಯಲ್ಲಿಯ ಅಪರಾಧಗಳ ಸಂಕ್ಷಿಪ್ತ ಅಧಿವಿಚಾರಣೆ
11. ಕಂಪನಿಗಳಿಂದ ಅಪರಾಧಗಳು
12. ಅಧಿಕಾರ ಪ್ರತ್ಯಾಯೋಜನೆ
13. ಅಪರಾಧಗಳ ರಾಜಿ
14. ನಿರಸನ ಮತ್ತು ಉಳಿಸುವಿಕೆ
15. ನಿಯಮ ರಚನಾಧಿಕಾರ


## ಉದ್ದೇಶ ಮತ್ತು ಕಾರಣಗಳ ಹೇಳಿಕೆ

**2003ರ ಅಧಿನಿಯಮ ಸಂಖ್ಯೆ 3.–** ಧೂಮಪಾನ ಮಾಡದಿರುವ ಸಾರ್ವಜನಿಕರನ್ನು ಧೂಮಪಾನದ ಅಪಾಯದಿಂದ ರಕ್ಷಿಸುವ ದಿಶೆಯಲ್ಲಿ ಮೊದಲ ಹೆಜ್ಜೆಯಾಗಿ, ಬಹಳಷ್ಟು ಜನರು ಸಾಕಷ್ಟು ಕಾಲ ಇರಬೇಕಾಗಿ ಬರುವ ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಸ್ಥಳಗಳು ಮತ್ತು ಸಾರ್ವಜನಿಕ ಸೇವಾ ವಾಹನಗಳಂಥ ಕೆಲವು ಆಯ್ಕೆ ಮಾಡಿದ ಸ್ಥಳಗಳಲ್ಲಿ ಧೂಮಪಾನವನ್ನು ನಿಷೇಧಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಜಾಹೀರಾತುಗಳ ಮೂಲಕ ಧೂಮಪಾನವನ್ನು ಉತ್ತೇಜಿಸುವ ವ್ಯವಸ್ಥೆಗೆ ನೀಡಲಾಗುತ್ತಿರುವ ಪ್ರೋತ್ಸಾಹವನ್ನು ಹಿಂತೆಗೆದುಕೊಳ್ಳುವುದು ಅವಶ್ಯಕವಾಗಿದೆ ಮತ್ತು ಯುವಪೀಳಿಗೆಯ, ಅದರಲ್ಲೂ ವಿಶೇಷವಾಗಿ ಮಕ್ಕಳ ಆರೋಗ್ಯವನ್ನು ಧೂಮಪಾನದ ದುಷ್ಪಪರಿಣಾಮದಿಂದ ರಕ್ಷಿಸುವ ಉದ್ದೇಶಕ್ಕಾಗಿ, ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಸಿಗರೇಟು ಮುಂತಾದವುಗಳ ಮಾರಾಟವನ್ನು ನಿಷೇಧಿಸುವುದಕ್ಕೆ ಮತ್ತು ಶಿಕ್ಷಣ ಸಂಸ್ಥೆಯ, ಆಸ್ಪತ್ರೆಯ, ಆರೋಗ್ಯ ಸಂಸ್ಥೆಯ, ಸರ್ಕಾರಿ ಕಚೇರಿಯ, ನ್ಯಾಯಾಲಯದ, ಗ್ರಂಥಾಲಯದ, ಆರಾಧನಾ ಸ್ಥಳದ, ಕಾಲೇಜಿನ, ಶಾಲೆಯ ಅಥವಾ ಇತರ ಸಂಸ್ಥೆಗಳ ಆವರಣದೊಳಗೆ ಅಂಥ ವಸ್ತುಗಳನ್ನು ಮಾರಾಟ, ವಿತರಣೆ ಅಥವಾ ದಾಸ್ತಾನು ಮಾಡದಿರುವುದಕ್ಕೆ ಕ್ರಮ ಕೈಗೊಳ್ಳಬೇಕಾಗಿದೆ.

ಆದ್ದರಿಂದ ಈ ವಿಧೇಯಕ.

**2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 2**

(2003 ರ ಮಾರ್ಚ್ ಹತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ಅಧಿನಿಯಮ, 2001.**

(2003 ರ ಫೆಬ್ರವರಿ 28 ನೇ ದಿನಾಂಕದಂದು ಭಾರತದ ರಾಷ್ಟ್ರಾಧ್ಯಕ್ಷರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯದಲ್ಲಿ, ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಸೇವಾವಾಹನಗಳಲ್ಲಿ ಧೂಮಪಾನ ನಿಷೇಧಕ್ಕಾಗಿ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆಗಾಗಿ ಉಪಬಂಧಿಸಲು ಮತ್ತು ಅವುಗಳಿಗೆ ಸಂಬಂಧಿಸಿದ ಅಥವಾ ಅವುಗಳಿಗೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಇದು ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಕರ್ನಾಟಕ ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ಅಧಿನಿಯಮ, 2001 ಎಂದು ಕರೆಯತಕ್ಕದ್ದು.

(2)ಇದು, ರಾಜ್ಯಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸ ಬಹುದಾದ ಅಂಥ [1][ದಿನಾಂಕ][1] ದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

1. ಈ ಅಧಿನಿಯಮದಲ್ಲಿ ಆವರಣಗಳ ಮೇಲುಗಡೆ ಚಿಕ್ಕದಾಗಿ ಬರೆಯಲಾದಂಥ ಅಂಕಿಗಳು ಈ ಅಧಿನಿಯಮದ ಕೊನೆಯಲ್ಲಿ ಹೇಳಲಾಗಿರುವ ಅಧಿನಿಯಮದ (ತಿದ್ದುಪಡಿ ಅಧಿನಿಯಮದ) ಕ್ರಮಸಂಖ್ಯೆಗಳನ್ನು ಸೂಚಿಸುತ್ತದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ)"ಜಾಹೀರಾತು" ಎಂದರೆ, ಯಾವುದೇ ನೋಟೀಸು, ಸುತ್ತೋಲೆ, ಭಿತ್ತಿಪತ್ರ, ಕಿರುಹೊತ್ತಿಗೆ, ಪ್ರಕಟಣಾಫಲಕಗಳ ಮೇಲೆ ಪ್ರದರ್ಶಿಸಲಾದುದು, ಅಥವಾ ಯಾವುದೇ ಬೆಳಕು, ಶಬ್ದ, ಹೊಗೆ, ಅನಿಲದಿಂದ ಮಾಡಲಾದ ಅಥವಾ ಧೂಮಪಾನಕ್ಕೆ ಪ್ರೋತ್ಸಾಹ ನೀಡುವಂಥ ಪರಿಣಾಮವುಳ್ಳ ಇತರ ಯಾವುದೇ ಸಾಧನಗಳಿಂದ ಮಾಡಲಾದ ದೃಶ್ಯರೂಪಣ ಮತ್ತು ಅವುಗಳನ್ನು ಒಳಗೊಳ್ಳುತ್ತದೆ ಮತ್ತು "ಜಾಹೀರಾತು ನೀಡು" ಎಂಬ ಅಭಿವ್ಯಕ್ತಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

(ಬಿ)"ಪ್ರಾಧಿಕೃತ ಅಧಿಕಾರಿ" ಎಂದರೆ, 6ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಒಬ್ಬ ಅಧಿಕಾರಿ;

(ಸಿ)"ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಸ್ಥಳ" ಎಂದರೆ, ಸಾರ್ವಜನಿಕರು ಭೇಟಿಕೊಡುವ ಒಂದು ಸ್ಥಳ ಮತ್ತು ಅದು ಸಭಾಂಗಣ, ಆಸ್ಪತ್ರೆ ಕಟ್ಟಡಗಳು, ಆರೋಗ್ಯ ಸಂಸ್ಥೆಗಳು, ಮನೋರಂಜನಾ ಕೇಂದ್ರಗಳು, ಉಪಹಾರ ಮಂದಿರಗಳು, ಸರ್ಕಾರಿ ಕಛೇರಿಗಳು, ನ್ಯಾಯಾಲಯ ಕಟ್ಟಡಗಳು, ಶಿಕ್ಷಣ ಸಂಸ್ಥೆಗಳು, ಗ್ರಂಥಾಲಯಗಳು, ಆರಾಧನಾ ಸ್ಥಳಗಳು ಮತ್ತು ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಸ್ಥಳವೆಂಬುದಾಗಿ ರಾಜ್ಯ ಸರ್ಕಾರವು ಅಧಿಸೂಚಿಸಿರುವ ಅಂಥ ಇತರೆ ಸ್ಥಳಗಳನ್ನು ಒಳಗೊಳ್ಳುತ್ತದೆ. ಆದರೆ, ಯಾವುದೇ ಬಯಲು ಸ್ಥಳವನ್ನು ಒಳಗೊಳ್ಳುವುದಿಲ್ಲ.

(ಡಿ)"ಸಾರ್ವಜನಿಕ ಸೇವಾ ವಾಹನ" ಎಂದರೆ, ಮೋಟಾರು ವಾಹನಗಳ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 59) 2ನೇ ಪ್ರಕರಣದ (35)ನೇ ಖಂಡದ ಅಡಿಯಲ್ಲಿ ಪರಿಭಾಷಿಸಲಾದಂತೆ ಒಂದು ವಾಹನ.

(ಇ)"ಧೂಮಪಾನ" ಎಂದರೆ, ತಂಬಾಕಿನ ಯಾವುದೇ ಬಗೆಯಲ್ಲಿರುವ ಸಿಗರೇಟು, ಸಿಗಾರ್, ಬೀಡಿಗಳ ರೂಪದಲ್ಲಾಗಲಿ ಅಥವಾ ಪೈಪ್, ರ್‍ಯಾಪರ್ ಅಥವಾ ಯಾವುದೇ ಇತರೆ ಉಪಕರಣದ ಮೂಲಕ ಇತರ ರೀತಿಯಲ್ಲಾಗಲಿ, ಮಾಡುವ ಧೂಮಪಾನ.

**3. ಧೂಮಪಾನ, ಧೂಮಪಾನ ವಸ್ತುಗಳ ಜಾಹೀರಾತು, ಮಾರಾಟ ಮತ್ತು ದಾಸ್ತಾನಿನ ನಿಷೇಧ.- ಯಾವೊಬ್ಬ ವ್ಯಕ್ತಿಯು,-**

(1)ಧೂಮಪಾನ ಮಾಡುವುದನ್ನು ನಿಷೇಧಿಸಲಾದ ಮತ್ತು ಅಂಥ ನಿಷೇಧವನ್ನು ಯಾವುದೇ ದೃಶ್ಯ ಅಥವಾ ಶ್ರವಣ ಮಾಧ್ಯಮದ ಮೂಲಕ ಪ್ರದರ್ಶಿಸಲಾದ ಅಥವಾ ತಿಳಿಸಲಾದ ಸಾರ್ವಜನಿಕ ಕೆಲಸದ ಅಥವಾ ಬಳಕೆಯ

ಯಾವುದೇ ಸ್ಥಳದಲ್ಲಿ ಅಥವಾ ಯಾವುದೇ ಸಾರ್ವಜನಿಕ ಸೇವಾ ವಾಹನದಲ್ಲಿ ಧೂಮಪಾನ ಮಾಡಲು ತೊಡಗತಕ್ಕದ್ದಲ್ಲ;

(2)ಯಾವುದೇ ಇತರೆ ಕಾನೂನಿನಲ್ಲಿ ಇದಕ್ಕೆ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಯಾವುದೇ ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಯಾವುದೇ ಸ್ಥಳದಲ್ಲಿ ಅಥವಾ ಯಾವುದೇ ಸಾರ್ವಜನಿಕ ಸೇವಾ ವಾಹನದಲ್ಲಿ ಧೂಮಪಾನ ಮಾಡುವುದಕ್ಕೆ ಅಥವಾ ಸಿಗರೇಟುಗಳ ಮತ್ತು ಬೀಡಿಗಳ ಮಾರಾಟಕ್ಕೆ ಪ್ರೋತ್ಸಾಹ ನೀಡಬಹುದಾದಂಥ ಜಾಹೀರಾತನ್ನು ನೀಡತಕ್ಕದ್ದಲ್ಲ:

ಪರಂತು, ಈ ಖಂಡವು,-

(ಎ)ಸಿಗರೇಟುಗಳನ್ನು ಅಥವಾ ಬೀಡಿಗಳನ್ನು ಒಳಗೊಂಡ ಪ್ಯಾಕೇಟುಗಳಲ್ಲಿ ಅಥವಾ ಮೇಲೆ ಸಿಗರೇಟು ಅಥವಾ ಬೀಡಿಗಳ ಜಾಹಿರಾತುಗಳ;

(ಬಿ)ವಿತರಣೆಗಾಗಿ ಅಥವಾ ಮಾರಾಟಕ್ಕಾಗಿ ಸಿಗರೇಟುಗಳನ್ನು ಅಥವಾ ಬೀಡಿಗಳನ್ನು ನೀಡಲಾಗುವ ಉಗ್ರಾಣಗಳ ಅಥವಾ ಅಂಗಡಿಗಳ ಪ್ರವೇಶದ್ವಾರದಲ್ಲಿ ಅಥವಾ ಒಳಗೆ ಪ್ರದರ್ಶಿಸಲಾದ ಸಿಗರೇಟುಗಳ ಅಥವಾ ಬೀಡಿಗಳ ಜಾಹಿರಾತುಗಳ,

– ಸಂಬಂಧದಲ್ಲಿ ಅನ್ವಯವಾಗತಕ್ಕದ್ದಲ್ಲ.

(3)ಹದಿನೆಂಟು ವರ್ಷಕ್ಕಿಂತ ಕಡಿಮೆ ವಯಸ್ಸಿನ ಯಾವೊಬ್ಬ ವ್ಯಕ್ತಿಗೆ, ಸಿಗರೇಟುಗಳು, ಬೀಡಿಗಳು ಅಥವಾ ಇತರೆ ಯಾವುದೇ ಧೂಮಪಾನ ವಸ್ತುವನ್ನು ಮಾರಾಟ ಮಾಡತಕ್ಕದ್ದಲ್ಲ;

(4)ಸ್ವತಃ ತಾನೇ ಆಗಲೀ ಅಥವಾ ತನ್ನ ಪರವಾಗಿ ಯಾವೊಬ್ಬ ವ್ಯಕ್ತಿಯ ಮೂಲಕವಾಗಲೀ ಯಾವುದೇ ಆಸ್ಪತ್ರೆಯ, ಆರೋಗ್ಯ ಸಂಸ್ಥೆಯ, ಸಾರ್ವಜನಿಕ ಕಚೇರಿಯ, ನ್ಯಾಯಾಲಯದ, ಗ್ರಂಥಾಲಯದ, ಕಾಲೇಜಿನ, ಶಾಲೆಯ ಅಥವಾ ಇತರ ಶಿಕ್ಷಣ ಸಂಸ್ಥೆಯ ಮತ್ತು ಆರಾಧನಾ ಸ್ಥಳದ
ಆವರಣಗಳಲ್ಲಿ ಸಿಗರೇಟುಗಳು ಅಥವಾ ಬೀಡಿಗಳು ಅಥವಾ ಇತರ ಯಾವುದೇ ಧೂಮಪಾನ ವಸ್ತುವನ್ನು ದಾಸ್ತಾನು, ಮಾರಾಟ ಅಥವಾ ವಿತರಣೆ ಮಾಡತಕ್ಕದ್ದಲ್ಲ.

**4. ನೋಟಿಸನ್ನು ನೋಡುವ ಸಲುವಾಗಿ ತೆರೆದಿಡುವುದು.**- 3ನೇ ಪ್ರಕರಣದ (1)ನೇ ಖಂಡದ ಉದ್ದೇಶಕ್ಕಾಗಿ, ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಒಂದು ಸ್ಥಳದ ಮಾಲೀಕ ವ್ಯವಸ್ಥಾಪಕ ಅಥವಾ ಪ್ರಭಾರದಲ್ಲಿರುವ ವ್ಯಕ್ತಿಯು 'ಧೂಮಪಾನ ನಿಷೇಧ ವಲಯ' ಮತ್ತು ಅಂಥ ಸ್ಥಳದಲ್ಲಿ ಅಥವಾ ಸಂದರ್ಭಾನುಸಾರ ಅದರ ಭಾಗದಲ್ಲಿ 'ಧೂಮಪಾನವನ್ನು ನಿಷೇಧಿಸಲಾಗಿದೆ' ಎಂಬುದನ್ನು ಸಾರ್ವಜನಿಕ ಕೆಲಸದ ಅಥವಾ ಬಳಕೆಯ ಆವರಣಗಳಲ್ಲಿ ಎದ್ದುಕಾಣುವ ಸಾರ್ವಜನಿಕ ಸ್ಥಳದಲ್ಲಿ ಅಥವಾ ಸ್ಥಳಗಳಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಶ್ರವಣ ಅಥವಾ ದೃಶ್ಯ ಮಾಧ್ಯಮದ ಮೂಲಕ ನೋಡುವ ಸಲುವಾಗಿ ತೆರೆದಿಡತಕ್ಕದ್ದು ಅಥವಾ ತಿಳಿಸತಕ್ಕದ್ದು.

**5. ದಂಡಗಳು.**- (1) 3ನೇ ಪ್ರಕರಣದ (1)ನೇ ಖಂಡದ ಅಥವಾ 4ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಒಂದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ, ಎರಡುನೂರು ರೂಪಾಯಿಗಳ ಕನಿಷ್ಠ ಜುಲ್ಮಾನೆಯಿಂದ ಆದರೆ, ಐದುನೂರು ರೂಪಾಯಿಗಳ ವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2)3ನೇ ಪ್ರಕರಣದ (2), (3) ಮತ್ತು (4)ನೇ ಖಂಡಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಎರಡನೆಯ ಅಥವಾ ತರುವಾಯದ ಅಪರಾಧದ ಸಂದರ್ಭದಲ್ಲಿ ಮೂರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಮತ್ತು ಐದು ನೂರು ರೂಪಾಯಿಗಳ ಕನಿಷ್ಠ ಜುಲ್ಮಾನೆಯಿಂದ, ಆದರೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**6. ಪ್ರಾಧಿಕೃತ ಅಧಿಕಾರಿ.**- (1) ರಾಜ್ಯ ಸರ್ಕಾರವು, ಈ ಅಧಿನಿಯಮದ ಉದ್ದೇಶಕ್ಕಾಗಿ ಅಧಿಸೂಚನೆಯ ಮೂಲಕ ಯಾವುದೇ ಪ್ರದೇಶದ ಅಥವಾ ಪ್ರದೇಶಗಳ ಸಂಬಂಧದಲ್ಲಿ ಒಬ್ಬ ಅಥವಾ ಹೆಚ್ಚು ಸಂಖ್ಯೆಯ ವ್ಯಕ್ತಿಗಳನ್ನು ಪ್ರಾಧಿಕೃತ ಅಧಿಕಾರಿಗಳೆಂದು ನೇಮಕ ಮಾಡಬಹುದು.

(2)(1)ನೇ ಉಪ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪ್ರತಿಯೊಬ್ಬ ಪ್ರಾಧಿಕೃತ ಅಧಿಕಾರಿಯನ್ನು ಭಾರತ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ 45) 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರನೆಂದು ಭಾವಿಸತಕ್ಕದ್ದು.

**7. ಅಪರಾಧದ ಸ್ಥಳದಿಂದ ಒಬ್ಬ ವ್ಯಕ್ತಿಯನ್ನು ಹೊರ ಹಾಕುವುದು.**- 3ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ ಮತ್ತು ಪ್ರಾಧಿಕೃತ ಅಧಿಕಾರಿಯಿಂದ ಅಥವಾ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ದರ್ಜೆಗೆ ಕಡಿಮೆಯಲ್ಲದ ಪೊಲೀಸ್ ಅಧಿಕಾರಿಯಿಂದ, ಧೂಮಪಾನವನ್ನು ಬಿಟ್ಟು ಬಿಡುವಂತೆ ಕೇಳಿಕೊಳ್ಳಲಾದ ಯಾವೊಬ್ಬ ವ್ಯಕ್ತಿಯು ಆ ಬಗ್ಗೆ ಪಟ್ಟುಹಿಡಿದರೆ, ಅಪರಾಧದ ಸ್ಥಳದಿಂದ ಹೊರಹಾಕಲ್ಪಡಲು ಬದ್ಧನಾಗಿರತಕ್ಕದ್ದು. ಪ್ರದರ್ಶನ ಮಂದಿರ, ಸಭಾಂಗಣ, ಮನೋರಂಜನಾ ಕೇಂದ್ರ ಅಥವಾ ಸಾರ್ವಜನಿಕ ಸೇವಾ ವಾಹನದಿಂದ ಹೊರಹಾಕಲ್ಪಟ್ಟ ಒಬ್ಬ ವ್ಯಕ್ತಿಯು, ಪ್ರಯಾಣಕ್ಕಾಗಿ ಅಥವಾ ಪ್ರಾತ್ಯಕ್ಷಿಕೆ, ಪ್ರದರ್ಶನ, ಕೂಟ ಅಥವಾ ಸಭೆಗೆ ಪ್ರವೇಶಕ್ಕಾಗಿ ಅವನು ಮಾಡಿದ್ದ ಯಾವುದೇ ಸಂದಾಯವನ್ನು ಹಿಂದಕ್ಕೆ ಪಡೆಯಲು ಅಥವಾ ಯಾವುದೇ ಇತರ ಪರಿಹಾರಧನ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**8. ಈ ಅಧಿನಿಯಮದ ಅಡಿಯಲ್ಲಿ ಅಪರಾಧಗಳ ಅಧಿವಿಚಾರಣೆ ನಡೆಸಲು ಮತ್ತು ಅಪರಾಧಗಳ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು ಸಕ್ಷಮವಾದ ನ್ಯಾಯಾಲಯ.**- (1) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟರ ನ್ಯಾಯಾಲಯವಲ್ಲದ ಇತರ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧದ ಸಂಜ್ಞೇಯತೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ ಮತ್ತು ಅದರ ಅಧಿವಿಚಾರಣೆಯನ್ನು ನಡೆಸತಕ್ಕದ್ದಲ್ಲ.

(2)ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಅಪರಾಧದ ಸಂಜ್ಞೇಯತೆಯನ್ನು, 3ನೇ ಪ್ರಕರಣದ (1)ನೇ ಖಂಡದ ಅಥವಾ 4ನೇ ಪ್ರಕರಣದ ಅಡಿಯಲ್ಲಿಯ ಅಪರಾಧಗಳಿಗೆ ಸಂಬಂಧಿಸಿದಂತೆ ಒಬ್ಬ ಪ್ರಾಧಿಕೃತ ಅಧಿಕಾರಿಯು ನೀಡಿದ ಲಿಖಿತ ದೂರಿನ ಆಧಾರದ ಮೇಲಲ್ಲದೆ ಮತ್ತು 3ನೇ ಪ್ರಕರಣದ (2), (3) ಮತ್ತು (4)ನೇ ಉಪ ಖಂಡಗಳ ಅಡಿಯಲ್ಲಿಯ ಅಪರಾಧಗಳ ಸಂಬಂಧದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಪೊಲೀಸ್ ಅಧಿಕಾರಿಯ ಲಿಖಿತ ವರದಿಯ ಮೇಲಲ್ಲದೆ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

**9. ನಿರ್ದಿಷ್ಟ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಾಗಿರುವುದು.**- ದಂಡ ಪ್ರಕ್ರಿಯಾ ಸಂಹಿತೆ, 1973 ರಲ್ಲಿ (1974ರ ಕೇಂದ್ರ ಅಧಿನಿಯಮ 2) ಏನೇ ಒಳಗೊಂಡಿದ್ದಾಗ್ಯೂ 3ನೇ ಪ್ರಕರಣದ (2), (3) ಮತ್ತು (4)ನೇ ಉಪಖಂಡಗಳ ಅಡಿಯಲ್ಲಿಯ ಅಪರಾಧಗಳು ಸಂಜ್ಞೇಯ ಮತ್ತು ಜಾಮೀನೀಯವಾಗಿರತಕ್ಕದ್ದು.

**10. ಅಧಿನಿಯಮದ ಅಡಿಯಲ್ಲಿಯ ಅಪರಾಧಗಳ ಸಂಕ್ಷಿಪ್ತ ಅಧಿವಿಚಾರಣೆ.**- ಈ ಅಧಿನಿಯಮದ ಅಡಿಯಲ್ಲಿಯ ಎಲ್ಲಾ ಅಪರಾಧಗಳ ಬಗ್ಗೆ, ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ ಕೇಂದ್ರ ಅಧಿನಿಯಮ 2) ಅಡಿಯಲ್ಲಿ ಮೊಕದ್ದಮೆಗಳ ಸಂಕ್ಷಿಪ್ತ ಅಧಿವಿಚಾರಣೆ ನಡೆಸಲು ಉಪಬಂಧಿಸಿದ ರೀತಿಯಲ್ಲಿಯೇ ಅಧಿವಿಚಾರಣೆ ನಡೆಸತಕ್ಕದ್ದು.

**11. ಕಂಪನಿಗಳಿಂದ ಅಪರಾಧಗಳು.**- (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ, ಅಪರಾಧವು ನಡೆದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರಗಳನ್ನು ನಡೆಸುವ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಮತ್ತು ಆ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು:

ಪರಂತು, ಈ ಉಪ ಪ್ರಕರಣದಲ್ಲಿರುವುದು ಯಾವುದೂ, ಯಾವೊಬ್ಬ ಅಂಥ ವ್ಯಕ್ತಿಯು, ಅಂಥ ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧವು ನಡೆಯುವುದನ್ನು ಪ್ರತಿಬಂಧಿಸಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ ಅವನನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ಶಿಕ್ಷೆಗೆ ಗುರಿಪಡಿಸತಕ್ಕದ್ದಲ್ಲ.

(2)(1)ನೇ ಉಪ ಪ್ರಕರಣದಲ್ಲಿ ಏನೇ ಇದ್ದಾಗ್ಯೂ ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅವನ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತಾದಲ್ಲಿ, ಅಂಥ ನಿರ್ದೇಶಕನು, ವ್ಯವಸ್ಥಾಪಕನು,

ಕಾರ್ಯದರ್ಶಿಯು ಅಥವಾ ಇತರ ಅಧಿಕಾರಿಯು ಅದಕ್ಕನುಸಾರವಾಗಿ ಅವನು ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ:**- ಈ ಪ್ರಕರಣದ ಉದ್ದೇಶಗಳಿಗಾಗಿ,-

(ಎ)"ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ, ಮತ್ತು

(ಬಿ)ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಫರ್ಮಿನ ಒಬ್ಬ ಪಾಲುದಾರ.

**12. ಅಧಿಕಾರ ಪ್ರತ್ಯಾಯೋಜನೆ.**- ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಅಡಿಯಲ್ಲಿ ತಾನು ಚಲಾಯಿಸಬಹುದಾದ ಯಾವುದೇ ಅಧಿಕಾರವನ್ನು ಅದರಲ್ಲಿ ನಮೂದಿಸಲಾದ ಅಂಥ ಅಧಿಕಾರಿಯು ಕೂಡ, ಅದರಲ್ಲಿ ಮತ್ತು ನಿರ್ದಿಷ್ಟ ಪಡಿಸಬಹುದಾದ ಅಂಥ ಯಾವುವೇ ಷರತ್ತುಗಳಿದ್ದರೆ ಅವುಗಳಿಗೆ ಒಳಪಟ್ಟು ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**13. ಅಪರಾಧಗಳ ರಾಜಿ.**- (1) ರಾಜ್ಯ ಸರ್ಕಾರ ಅಥವಾ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಸಂಬಂಧದಲ್ಲಿ ರಾಜ್ಯ ಸರ್ಕಾರವು ಪ್ರಾಧಿಕರಿಸಿದ ಯಾವೊಬ್ಬ ವ್ಯಕ್ತಿಯು, ವ್ಯವಹರಣೆಗಳನ್ನು ಪ್ರಾರಂಭಿಸುವ ಮೊದಲು ಅಥವಾ ನಂತರ, ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುವೇ ಅಪರಾಧಗಳ ಪೈಕಿ ಯಾವುದೇ ಅಪರಾಧದ ಬಗ್ಗೆ ರಾಜಿ ಮಾಡಿಕೊಳ್ಳಬಹುದು.

(2)(1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಅಪರಾಧದ ಬಗ್ಗೆ ರಾಜಿ ಮಾಡಿಕೊಂಡಾಗ, ಅಪರಾಧಿಯು ಅಭಿರಕ್ಷೆಯಲ್ಲಿದ್ದರೆ, ಬಿಡುಗಡೆಗೊಳಿಸತಕ್ಕದ್ದು ಮತ್ತು ರಾಜಿಯಾದ ಅಪರಾಧದ ಸಂಬಂಧದಲ್ಲಿ ಆತನ ವಿರುದ್ಧ ಯಾವುದೇ ವ್ಯವಹರಣೆಯನ್ನು ಮುಂದುವರೆಸತಕ್ಕದ್ದಲ್ಲ.

**14. ನಿರಸನ ಮತ್ತು ಉಳಿಸುವಿಕೆ.**- (1) ಕರ್ನಾಟಕ ಪ್ರದರ್ಶನ ಮಂದಿರಗಳಲ್ಲಿ ಮತ್ತು ಸಾರ್ವಜನಿಕ ಸಭಾಂಗಣಗಳಲ್ಲಿ ಧೂಮಪಾನ ನಿಷೇಧ ಅಧಿನಿಯಮ, 1963ನ್ನು (1963ರ ಕರ್ನಾಟಕ ಅಧಿನಿಯಮ 30) ಈ ಮೂಲಕ ನಿರಸನಗೊಳಿಸಲಾಗಿದೆ ಮತ್ತು ಕರ್ನಾಟಕ ಪೊಲೀಸ್ ಅಧಿನಿಯಮ, 1963ರ (1964ರ ಕರ್ನಾಟಕ ಅಧಿನಿಯಮ 4) 92ನೇ ಪ್ರಕರಣದಲ್ಲಿ (1)ನೇ ಉಪಪ್ರಕರಣದ (ವೈ) ಖಂಡದಲ್ಲಿ "ಧೂಮಪಾನ ಮಾಡಿದರೆ ಅಥವಾ" ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು:

ಪರಂತು, ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899ರ 6ನೇ ಪ್ರಕರಣದ ಉಪ ಬಂಧಗಳು ಸದರಿ ಅಧಿನಿಯಮಿತಿಯ ನಿರಸನದ ಸಂಬಂಧದಲ್ಲಿ ಅನ್ವಯವಾಗತಕ್ಕದ್ದು ಮತ್ತು ಸದರಿ ಕಾನೂನಿನ ಉಪಬಂಧಗಳು ಮತ್ತು ಸದರಿ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಸದರಿ ಅಧಿನಿಯಮಿತಿ ಮತ್ತು ಈ ಅಧಿನಿಯಮದ ಮೂಲಕ ನಿರಸನಗೊಳಿಸಿದ ಮತ್ತು ಪುನಃ ಅಧಿನಿಯಮಿತಗೊಳಿಸಿದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**15. ನಿಯಮ ರಚನಾಧಿಕಾರ.**- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ ಸಾಮಾನ್ಯವಾಗಿ, ಈ ಅಧಿನಿಯಮದ ಉಪ ಬಂಧಗಳನ್ನು ಜಾರಿಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2)ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಸದರಿ ಅಧಿವೇಶನ ಅಥವಾ ಮುಂದುವರೆದ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನಗಳ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಅಂಥ ಮಾರ್ಪಾಡನ್ನು ಅಥವಾ ರದ್ದಿಯಾತಿಯನ್ನು ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸಿದ ದಿನದಂದು ಆ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಲಾಗಿದ್ದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

# THE KARNATAKA PROHIBITION OF SMOKING AND PROTECTION OF HEALTH OF NON-SMOKERS ACT, 2001

## Arrangement of Sections

Statement of Objects and Reasons

**Sections:**

1. Short title and commencement
2. Definitions
3. Prohibition of smoking, advertisement, sale and storage of smoking substances
4. Notice to be displayed
5. Penalties
6. Authorised Officer
7. Removal of a person from the Place of an offence
8. Court Competent to try offences under this Act and take cognizance of offences
9. Certain offences to be cognizable and Bailable
10. Offences under the Act to be tried summarily
11. Offences by Companies
12. Delegation of Powers
13. Compounding of offences
14. Repeal and savings
15. Power to make rules

## STATEMENT OF OBJECTS AND REASONS

In order to protect the non-smoking public from the hazards of passive smoking it is considered necessary to prohibit tobacco smoking, to start with atleast in a few selected places, like places of public work or use and in public service vehicles, where large number of people are present for prolonged periods.

Promotion of smoking through advertisements needs to be discouraged and the health of the younger generation, particularly children, also needs to be protected from the ill-effects of tobacco smoking by prohibiting sale of cigarettes, etc., to persons below 18 years and sale, distribution or storing of such products within the premises of any Hospital, Health Institution, Public Office, Court, Library, Place of worship, College, School or other Institution.

Hence the Bill.

(L.C. Bill No. 3 of 2001)

(Entry 6 of List-II of the Seventh Schedule to the Constitution of India)

## KARNATAKA ACT 2 OF 2003

*(First published in the Karnataka Gazette Extra-ordinary on the 10th day of March 2003)*

## THE KARNATAKA PROHIBITION OF SMOKING AND PROTECTION OF HEALTH OF NON-SMOKERS ACT, 2001

*(Received the assent of the president of India on the Twenty eighth day of February 2003)*

An Act to provide for prohibition of smoking in places of public work or use and in public service vehicles and for the protection of health of non-smokers in the State of Karnataka and to make provision for matters connected therewith or incidental thereto.

Be it enacted by the Karnataka State Legislature in the fifty second year of the Republic of India as follows:-

**1. Short title and commencement**.- (1) This Act may be called the Karnataka Prohibition of Smoking and Protection of Health of Non-Smokers Act, 2001.

(2) It shall come into force from such date, as the State Government may, by notification, appoint and different dates may be appointed for different provisions of this Act.

**2. Definitions.-** In this Act, unless the context otherwise requires,-

(a) "advertisement" means and includes any notice, circular, wall paper, pamphlet, display on hoardings, or any visible representation made by means of any light, sound, smoke, gas or any other means which has the effect of promoting smoking and the expression 'advertise' shall be construed accordingly;

(b) "Authorised Officer" means an officer appointed under section 6;

(c) "Place of public work or use" means a place which is visited by general public and includes Auditorium, Hospital Buildings, Health Institutions, Amusement centres, Restaurants, Public Offices, Court Buildings, Educational Institutions, Libraries, Places of worship and such other places notified by the State Government to be a Place of Public Work or use but does not include any open place;

(d) "Public Service Vehicle" means a vehicle as defined under clause (35) of section 2 of the Motor Vehicles Act, 1988 (Central Act 59 of 1988);

(e) "smoking" means smoking of tobacco in any form, whether in the form of cigarette, cigar, beedis or otherwise with the aid of a pipe, wrapper or any other instrument.

**3. Prohibition of smoking, advertisement, sale and storage of smoking substances.-** No person shall,- (1) engage in smoking in any place of public work or use, where smoking is prohibited and such prohibition is displayed or conveyed through any audio or visual medium, or in any Public Service Vehicle.

(2) notwithstanding anything contrary contained in any other law advertise in any place of Public Work or use or in any Public Service Vehicle to promote smoking or the sale of cigarettes and beedies:

Provided that this clause shall not apply in relation to,-

(a) an advertisement of cigarettes or beedies in or on a package containing cigarettes or beedies;

(b) advertisement of cigarettes or beedies which is displayed at the entrance or inside a warehouse or a shop where cigarettes or beedies are offered for distribution or sale.

(3) sell cigarettes, beedis or any other smoking substance to any person who is below the age of eighteen years;

(4) himself or by any person on his behalf, store, sell or distribute cigarettes or beedis or any other smoking substance within the premises of any Hospital, Health Institution, Public Office, Court, Library, College, School or other Educational Institution and Place of worship.

**4. Notice to be displayed.-** For the purpose of clause (1) of section 3, the owner or manager or person incharge of a place of public work or use shall display or convey through audio or visual medium in Kannada and English languages at a conspicuous place or places in the premises of place of public work or use prominently stating that the entire place or such part of it is a "No smoking Zone" and that "Smoking is prohibited in such place or, as the case may be, part of it."

**5. Penalties.-** Any person, who contravenes the provisions of: - (1) clause (1) of section 3 or of section 4 shall be punishable with fine which may extend to one hundred rupees and in case of second or subsequent offence, shall be punishable with a minimum fine of two hundred rupees, but which may extend to five hundred rupees;

(2) clauses (2),(3),(4) of section 3 shall be punishable with fine which may extend to five hundred rupees and in case of second or subsequent offence, shall be punishable with imprisonment for a term which may extend to three months, and with a minimum fine of five hundred rupees, but which may extend to one thousand rupees.

**6. Authorised Officer.-** (1) The State Government may by notification appoint one or more persons in respect of any area or areas to be authorised officers for the purpose of this Act.

(2) Every authorised officer appointed under sub-section (1) shall be deemed to be a public servant within the meaning of section 21 of the Indian Penal Code, 1860 (Central Act 45 of 1860).

**7. Removal of a person from the Place of an offence.-** Any person who contravenes the provisions of section 3 and who is being asked by an authorised officer or a Police Officer not below the rank of a Sub-Inspector of Police to desist from smoking persists, shall be liable to be removed from the place of the offence. A person removed from the show house, auditoria, amusement centre or a Public Service Vehicle shall not be entitled to refund of any payment made by him for journey or for admission to the demonstration, exhibition, assembly or meeting or to any other compensation.

**8. Court Competent to try offences under this Act and take cognizance of offences.-** [1] No court other than the court of a Metropolitan Magistrate or Judicial Magistrate First-Class shall take cognizance of and try an offence under this Act.

(2) No court shall take cognizance of any offence under this Act except on a complaint in writing of an authorized officer with respect to offences under clause (1) of section 3 or section 4 and on a report in writing of a Police Officer, not below the rank of Sub-Inspector of Police, with respect to offences under clauses (2), (3) and (4) of section 3.

**9. Certain offences to be cognizable and Bailable.-** Notwithstanding anything contained in the Code of Criminal Procedure, 1973 (Central Act 2 of 1974) offences under clauses (2), (3) and (4) of section 3 shall be cognizable and bailable.

**10. Offences under the Act to be tried summarily.-** All offences under this Act shall be tried summarily in the manner provided for summary trial of cases under the Code of Criminal Procedure, 1973 (Central Act 2 of 1974).

**11. Offences by Companies.-** (1) Where an offence under this Act has been committed by a company, every person, who, at the time the offence was committed, was in charge of, and was responsible to, the company for the conduct of the business of the company, as well as the company, shall be deemed to be guilty of the offence and shall be liable to be proceeded against and punished accordingly:

Provided that nothing contained in this sub-section shall render any such person liable to any punishment, if he proves that the offence was committed without his knowledge or that he had exercised all due diligence to prevent the commission of such offence.

(2) Notwithstanding anything contained in sub-section(1), where any offence under this Act has been committed by a company and it is proved that the offence has been committed with the consent or connivance of, or is attributable to any neglect on the part of, any director, manager, secretary or other officer of the company, such director, manager, secretary or other officer shall be proceeded against and punished accordingly.

**Explanation.-** For the purposes of this section,-

(a) "Company" means a body corporate and includes a firm or other association of individuals; and

(b) "Director", in relation to a firm, means a partner in the firm.

**12. Delegation of Powers.-** The State Government may, by notification in the Official Gazette, direct that any power exercisable by it under this Act, may also be exercised by such officer as may be mentioned therein and subject to such conditions, if any, as may be specified therein.

**13. Compounding of offences.-** (1) The State Government or any person authorised by the State Government in this behalf by general or special order, may either before or after the institution of the proceedings compound any of the offences made punishable under this Act.

(2) When an offence is compounded under sub-section (1), the offender if in custody shall be discharged and no further proceeding shall be taken against him in respect of the offence compounded.

**14. Repeal and savings.-** (1) The Karnataka Prohibition of Smoking in Show houses and Public halls Act, 1963 (Karnataka Act 30 of 1963) is hereby repealed and in clause (y) of sub-section (1) of section 92 of the Karnataka Police Act, 1964 (Karnataka Act 4 of 1964) the words "smokes or" shall be omitted:

Provided that the provisions of section 6 of the Karnataka General Clauses Act, 1899 shall be applicable in respect of the repeal of the said enactment and the provisions of the said law and sections 8 and 24 of the said Act shall be applicable as if the said enactment and provisions had been repealed and re-enacted by this Act.

**15. Power to make rules.-** (1) The State Government may by notification and after previous publication make rules generally for the purpose of carrying into effect the provisions of this Act.

(2) Every rule made under this Act shall be laid as soon as may be after it is made, before each House of the State Legislature while it is in session for a total period of thirty days which may be comprised in one session or in two or more successive sessions, and if, before the expiry of the session immediately following the session or successive sessions

aforesaid both Houses agree in making any modification in the rule or both Houses agree that the rule should not be made, the rule shall from the date on which the modification or annulment is notified by the Government in the Official Gazette have effect only in such modified form or be of no effect, as the case may be, so however, that any modification or annulment shall be without prejudice to the validity of anything previously done under such rule.

The above translation of the ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ಅಧಿನಿಯಮ, 2001 (2003 ರ ಕರ್ನಾಟಕ ಅಧಿನಿಯಮ ಸಂಖ್ಯೆ 2) be published in the official Gazette under clause (3) of Article 348 of the constitution of India.